# ತಪೋವಾಣಿ

ಸಂ. 8 ಸಂ. 12 ಡಿಸೆಂಬರ್ 2011 ರೂ.15

ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**(ಅನು: ಶ್ಯಾಮಲಾದೇವಿ)**

ವರ್ಷ ಕೊನೆಗೊಳ್ಳುತ್ತಿದೆ. ಹೊಸ ವರ್ಷ ಪಕ್ಕದಲ್ಲೇ ಕಾಯುತ್ತಿದೆ. ಮತ್ತು ಒಂದು ಬೃಹತ್ತಾದ ಮಹತ್ತರ ಬದಲಾವಣೆ ಆಗಿದೆ. ಪ್ರಜ್ಞೆಯಲ್ಲಿ ಬದಲಾವಣೆ ಆಗಿದೆ.

ಈ ಮಹತ್ತರ ಬದಲಾವಣೆಯ ಬಗ್ಗೆ ಮೊದಲೇ ಹೇಳಲಾಗಿತ್ತು ಮತ್ತು ಅದನ್ನು ಬಹಳವಾಗಿ ಎದುರುನೋಡಲಾಗುತ್ತಿತ್ತು. ಹಂತಹಂತವಾಗಿ ಸಂಭವಿಸುತ್ತಿರುವ ಈ ಬದಲಾವಣೆಯ ಪ್ರಕ್ರಿಯೆಗಳನ್ನು ಗಮನಿಸುತ್ತಿರುವ ಅನುಭಾವಿಗಳಾದ ಬೆಳಕಿನ ಕಾರ್ಯಕರ್ತರು ಮಹತ್ತರ ಬದಲಾವಣೆಯನ್ನು ಗಮನಿಸಿದ್ದಾರೆ ಮತ್ತು ಅದರ ಪ್ರಬಲ ಪರಿಣಾಮವನ್ನು ವೀಕ್ಷಿಸುತ್ತಿದ್ದಾರೆ.

ಈವರೆಗೆ ಬಹುದೊಡ್ಡ ವಿಧ್ವಂಸಕ ಘಟನೆಗಳು ಸಂಭವಿಸಿಲ್ಲ. ಪರಮಾತ್ಮನ ವೀಕ್ಷಕರಿಂದ ಮತ್ತು ಬೆಳಕಿನ ಕಾರ್ಯಕರ್ತರಿಂದ ಅವು ನಿರೀಕ್ಷಿತವಾಗಿರಲಿಲ್ಲ. ಈ ವಿಸ್ಫೋಟ ತಕ್ಷಣ ಆಗುವುದಿಲ್ಲ; ಅದು ಒಮ್ಮೆ ಸಂಭವಿಸುವ ಘಟನೆ ಅಲ್ಲ. ಅದರ ಪ್ರಾರಂಭಗಳನ್ನು ಜಾಗರೂಕ ವೀಕ್ಷಕರು ಗಮನಿಸುತ್ತಿದ್ದಾರೆ.

ಈ ಮಹತ್ತರ ಬದಲಾವಣೆ ಜನರಲ್ಲಿ ಇನ್ನೂ ಹೆಚ್ಚಿನ ಜಾಗೃತಿಯನ್ನು ಉಂಟುಮಾಡುತ್ತದೆ. ನಮ್ಮ ಎಲ್ಲ ಸಮಸ್ಯೆಗಳಿಗೆ ಮೂಲ ಕಾರಣ ಮೌಲ್ಯಗಳ ಭ್ರಷ್ಟತೆ ಎಂಬ ವಾಸ್ತವಕ್ಕೆ ನಾವು ಎಚ್ಚರಗೊಳ್ಳುತ್ತೇವೆ. ಭ್ರಷ್ಟರಿಂದ ಪ್ರಪಂಚದ ಕಾರ್ಯ ನಿರ್ವಹಣೆಯಾಗುತ್ತಿರುವ ರೀತಿಗಳಿಗೆ ನಾವು ಅಸಹನೆ ಮತ್ತು ಜಿಗುಪ್ಸೆಪಡುತ್ತೇವೆ. ನಾವು ಪ್ರತಿಭಟಿಸಲು ಬೀದಿಗಳಿಗೆ ಬರದಿರಬಹುದು. ಆದರೆ ನಾವು ಪ್ರತಿಯೊಬ್ಬರೂ ಯಾವುದೇ ಕ್ಷೇತ್ರದಲ್ಲಾಗುವ ಮೌಲ್ಯಗಳ ಭ್ರಷ್ಟತೆಯನ್ನು ಖಂಡಿತವಾಗಿ ತಿರಸ್ಕರಿಸುತ್ತೇವೆ. ಕೇವಲ ರಾಜಕೀಯ ಮತ್ತು ಆಡಳಿತ ಕ್ಷೇತ್ರಗಳಲ್ಲಷ್ಟೇ ಅಲ್ಲ, ಎಲ್ಲ ಕ್ಷೇತ್ರಗಳಲ್ಲಿ: ಶಿಕ್ಷಣ, ವೈದ್ಯಕೀಯ, ಧಾರ್ಮಿಕ, ಹೊಸಯುಗದ ವ್ಯಾಪಾರ... ಈ ತಿರಸ್ಕಾರ, ಕಂಪನಗಳನ್ನು ಉಂಟುಮಾಡುತ್ತದೆ ಮತ್ತು ಬೃಹತ್ ಚೈತನ್ಯ ವಲಯಗಳನ್ನು ಸೂಕ್ಷ್ಮ ಮಟ್ಟದಲ್ಲಿ ನಿರ್ಮಿಸುತ್ತದೆ.

ನಾವು ಅದರ ಪ್ರಭಾವವನ್ನು ಭೌತಿಕ ಮಟ್ಟದಲ್ಲಿ ಕಾಣಬಹುದು. ಪ್ರಳಯ ಕೆಲಸಮಾಡುವುದು ಹೀಗೆ. ಪ್ರಳಯ ಎಂದರೆ ವಿನಾಶವಲ್ಲ, ಬದಲಾವಣೆ; ಸಂಪೂರ್ಣ ಪರಿವರ್ತನೆ. ಅದು ಹೆಚ್ಚಾಗಿ ಸೂಕ್ಷ್ಮ ಮಟ್ಟದಿಂದ ಕೆಲಸ ಮಾಡುತ್ತದೆ.

ಈ ಮಹತ್ತರ ಬದಲಾವಣೆ, ನಾವು ಆಯ್ಕೆಮಾಡಿಕೊಳ್ಳಲು ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ. ಬದುಕಲು ಸರಿಯಾದ ಮಾರ್ಗಗಳನ್ನು, ಸರಿಯಾದ ಆಲೋಚನೆಗಳನ್ನು, ಸರಿಯಾದ ಭಾವನೆಗಳನ್ನು ನಾವು ಆಯ್ಕೆ ಮಾಡಬೇಕು. ನಾವು ಯಾವುದೇ ಹೊರಗಿನ ಪ್ರೇರಣೆಗಳು ಮತ್ತು ಉಪದೇಶಗಳಿಲ್ಲದೆ, ಇವನ್ನು ಸಹಜವಾಗಿಯೇ ಮಾಡುತ್ತೇವೆ.

ಈ ಮಹತ್ತರ ಬದಲಾವಣೆ, ನಮ್ಮ ಹಿಂದಿನ ತಪ್ಪುಗಳಿಗೆ ನಾವು ಕ್ಷಮೆ ಕೇಳುವ ಒಂದು ಅವಕಾಶ ಕೂಡ ಆಗಿದೆ. ಆಗ ನಮ್ಮನ್ನು ಕ್ಷಮಿಸಲಾಗುತ್ತದೆ! ವಿಶ್ವದಿಂದ, ದೈವೀ ಅವತಾರದಿಂದ, ದ್ವಿತೀಯ ಆಗಮನದ ದೈವೀ ಪ್ರಭುವಿನಿಂದ ಕ್ಷಮೆ ಪಡೆಯುತ್ತೇವೆ. ಆ ದಿನವನ್ನು ನಾವು ಮಹಾತೀರ್ಪಿನ ದಿನ ಎಂದು ಕರೆಯಬಹುದು. ಅದು ಒಂದು ದಿನವಲ್ಲ, ಅದೊಂದು ಅವಧಿ. ಮತ್ತು ತೀರ್ಪು ಕೊಡುವುದು ಎಂದರೆ ಶಿಕ್ಷೆ ವಿಧಿಸುವುದಲ್ಲ. ಕ್ಷಮಿಸುವುದು ಮತ್ತು ನಾವು ಪ್ರೀತಿಯನ್ನು ಅನುಭವಿಸಲು ಅವಕಾಶ ಮಾಡಿಕೊಡುವುದು. ಈ ಮಹತ್ತರ ಬದಲಾವಣೆ ಪ್ರೀತಿ ಚೈತನ್ಯಗಳ ಮಹಾಪೂರವನ್ನೇ ತರುತ್ತದೆ. ಇದರಲ್ಲಿ ನಾವು ಎಂದಿಗೂ ಮುಳುಗುವುದಿಲ್ಲ, ಯಾವಾಗಲೂ ತೇಲುತ್ತೇವೆ.

ಈ ಮಹತ್ತರ ಬದಲಾವಣೆ, ವಿಶ್ವದ ಅನುಗ್ರಹ. ಅದರ ಇರುವಿಕೆಯ ಅರಿವು ನಮಗೆಲ್ಲರಿಗೂ ನೇರವಾಗಿ ಆಗದಿರಬಹುದು. ಆಗದಿದ್ದರೆ ಪರವಾಗಿಲ್ಲ. ನಾವು ಅದನ್ನು ತಿಳಿಯಬೇಕಾಗಿಲ್ಲ. ಆದರೂ ಅದು ಕೆಲಸ ಮಾಡುತ್ತದೆ. ಇದು ಬಹಳ ಮುಖ್ಯ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಭಾರತ.
✆ (080) 2846 5280, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



2011 ಅಕ್ಟೋಬರ್ 27 ರಂದು ತಪೋನಗರ ನಿವಾಸಿಗಳು ಒಟ್ಟಾಗಿ ಸೇರಿ ಪಟಾಕಿ ಹೊಡೆಯುವುದರ ಮುಖಾಂತರ ದೀಪಾವಳಿಯನ್ನು ಆಚರಿಸಿದರು.

### ಸುದ್ದಿ-ಸೂಚನೆ

- 13-11-2011 ಮತ್ತು 20-11-2011ರಂದು ಅನುಕ್ರಮವಾಗಿ ಶಂಬಲ ಗ್ರೂಪ್ ಮತ್ತು ರಾ ಗ್ರೂಪ್‌ನ ಸಾಧಕರು ಗುರೂಜಿಯವರಿಂದ ಮಾರ್ಗದರ್ಶನ ಮತ್ತು ದೀಕ್ಷೆಗಾಗಿ ತಪೋನಗರದಲ್ಲಿ ಸೇರಿದ್ದರು.
- 18-11-2011 ರಿಂದ 27-11-2011ರವರೆಗೆ ನಡೆದ 'ಬೆಂಗಳೂರು ಪುಸ್ತಕೋತ್ಸವ'ದಲ್ಲಿ ನಾವು ಭಾಗವಹಿಸಿದೆವು.
- 25-11-2011 ರಂದು ಗ್ರಹಣದ ಪ್ರಯುಕ್ತ ತಪೋನಗರದಲ್ಲಿ ವಿಶೇಷ ಧ್ಯಾನವನ್ನು ಆಯೋಜಿಸಲಾಗಿತ್ತು.
- ಶಂಬಲ ಗ್ರೂಪ್‌ನ ಹೊಸ ಬ್ಯಾಚ್ ಜನವರಿ 2012ರಿಂದ ಆರಂಭವಾಗುತ್ತದೆ. ದೂರ ಕಲಿಕೆಯ ಸಾಧಕರು ಕೂಡ ಸೇರಬಹುದು. 30-12-2011 ರಿಜಿಸ್ಟ್ರೇಶನ್‌ಗೆ ಕೊನೆಯ ದಿನಾಂಕವಾಗಿದೆ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಶುಕ್ರ | ಶುಕ್ಲಾಷ್ಟಮಿ |
| 05 | ಸೋಮ | ಶುಕ್ಲದಶಮಿ |
| 08 | ಗುರು | ಶಿವದೀಪ |
| 10 | ಶನಿ | ಪೂರ್ಣಿಮಾ<br>ಪೂರ್ಣಚಂದ್ರ ಗ್ರಹಣ:<br>ಸಂಜೆ 5.03-ರಾತ್ರಿ 10.59<br>ವಿಷ್ಣುದೀಪ |
| 16 | ಶುಕ್ರ | ಶೂನ್ಯಮಾಸ ಆರಂಭ |
| 18 | ಭಾನು | ಕೃಷ್ಣಾಷ್ಟಮಿ |
| 23 | ಶುಕ್ರ | ಮಾಸ ಶಿವರಾತ್ರಿ |
| 24 | ಶನಿ | ಅಮಾವಾಸ್ಯೆ |
| 25 | ಭಾನು | ಕ್ರಿಸ್‌ಮಸ್<br>ಅಖಂಡ ಧ್ಯಾನ |

ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12<br>ವಿಶೇಷ ಧ್ಯಾನ & ಲೈಟ್ ಚಾನಲಿಂಗ್: ಮಧ್ಯಾಹ್ನ 12-1 |
| 10-12-11 | ಪೂರ್ಣಚಂದ್ರ ಗ್ರಹಣ<br>ವಿಶೇಷ ಧ್ಯಾನ :<br>ಸಂಜೆ 5.03-ರಾತ್ರಿ 10.59 |
| 25-12-11 | ಅಖಂಡ ಧ್ಯಾನ :<br>ಬೆಳಿಗ್ಗೆ 6-ಸಂಜೆ 6<br>ಕ್ರಿಸ್‌ಮಸ್ ವಿಶೇಷ ಧ್ಯಾನ:<br>ಮಧ್ಯಾಹ್ನ 12-1 |

**ಅಖಂಡ ಧ್ಯಾನ**

**25-12-2011ರಂದು, ತಪೋನಗರದಲ್ಲಿ ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ಇದರಲ್ಲಿ ಭಾಗವಹಿಸಲು ಇಚ್ಛಿಸುವವರು ತಮ್ಮ ಹೆಸರನ್ನು ನಮ್ಮ ಆಫೀಸಿನಲ್ಲಿ ತಾವು ಭಾಗವಹಿಸುವ ಸಮಯದೊಂದಿಗೆ 20-12-2011ರೊಳಗೆ ನೋಂದಾಯಿಸಬೇಕಾಗಿ ವಿನಂತಿ.**

ಈಗ www.lightagemasters.com ವೆಬ್‌ಸೈಟ್ ಮೂಲಕ ಹೊರದೇಶಗಳಲ್ಲಿ ವಾಸಿಸುವ ನಮ್ಮ ಸಾಧಕರು ತಮ್ಮ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಆನ್‌ಲೈನ್‌ನಲ್ಲಿ ಹಣ ಕಳುಹಿಸುವ ವ್ಯವಸ್ಥೆಯನ್ನು ಒದಗಿಸಲಾಗಿದೆ.

10-12-2011 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.

ಈಗ ಗುರೂಜಿಯವರು 'Speaking Tree' ಯ ಮಾಸ್ಟರ್‌ಗಳ ಸಾಲಿಗೆ ಸೇರ್ಪಡೆಯಾಗಿದ್ದಾರೆ. ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

- ತಮ್ಮ ಸಾಂಸಾರಿಕ ಜೀವನ, ಕೆಲಸಗಳು ಮತ್ತು ಜವಾಬ್ದಾರಿಗಳ ನಡುವೆ ಮೌನವಾಗಿ ನಮ್ಮ ಕಾರ್ಯಕರ್ತರು ಲೈಟ್ ಚಾನಲ್ ಕೆಲಸ ಮಾಡುತ್ತಿದ್ದಾರೆ. ಅವರು ತಮ್ಮ ಬಿಡುವಿಲ್ಲದ, ಬಹುಬೇಡಿಕೆಯ ಜೀವನದಲ್ಲಿ ವೈಯಕ್ತಿಕ ಸಮಯವನ್ನು ತ್ಯಾಗಮಾಡಿ ಶಾಲೆಗಳನ್ನು ಸಂಪರ್ಕಿಸಲು ತಮ್ಮ ಸಮಯವನ್ನು ಮೀಸಲಿಡುತ್ತಾರೆ. ಈ ಭೂಮಿಯ ಮೇಲೆ ಹೊಸಯುಗವನ್ನು ಕಾಣುವ ಅವರ ಪ್ರಾಮಾಣಿಕ ಬಯಕೆ ಮತ್ತು ತಮ್ಮ ಕೆಲಸದೆಡೆಗೆ ಅವರಿಗಿರುವ ಸಂಪೂರ್ಣ ನಿಷ್ಠೆಗೆ ಪ್ರತಿಯಾಗಿ ವಿಶ್ವ, ಅವರಿಗೆ ಶಾಲೆಯ ಆಡಳಿತವರ್ಗ ಹಾಗೂ ಮಕ್ಕಳನ್ನು ನೀಡುತ್ತಿದೆ.
- 17.5 ಲಕ್ಷಕ್ಕೂ ಹೆಚ್ಚು ಮಕ್ಕಳು ಕನಿಷ್ಠ ಪಕ್ಷ ಒಮ್ಮೆಯಾದರೂ ಲೈಟ್ ಚಾನಲ್ ಮಾಡಿರುವುದು ಮತ್ತು 2.6 ಲಕ್ಷಕ್ಕೂ ಹೆಚ್ಚು ಮಕ್ಕಳು ಸುಮಾರು 500 ಶಾಲೆಗಳಲ್ಲಿ ಪ್ರತಿದಿನದ ಶಾಲಾಪ್ರಾರ್ಥನೆಯ ಸಮಯದಲ್ಲಿ ಲೈಟ್ ಚಾನಲ್ ಮಾಡುತ್ತಿರುವುದು ಒಂದು ಮಹತ್ವದ ಘಟನೆ.
- ಇನ್ನೂ ಹೆಚ್ಚು ಜನರು ಈ ಕಾರ್ಯಕ್ರಮಕ್ಕೆ ಸೇರಲು ಮತ್ತು ಅದಕ್ಕೆ ಪ್ರತಿಯಾಗಿ ಇನ್ನೂ ಹೆಚ್ಚಿನದನ್ನು ನೀಡಲು ವಿಶ್ವ ಕಾಯುತ್ತಿದೆ. ■

## ಲೈಟ್ ಚಾನಲಿಂಗ್ ಅನುಭವಗಳು

ಲೈಟ್ ಚಾನಲ್ ಮಾಡಿದ ನಂತರ ಕೆಲವು ಕ್ಷಣಗಳ ಕಾಲ ನನ್ನಲ್ಲಿ ಶಾಂತತೆಯ ಅನುಭವವಾಯಿತು ಮತ್ತು ಆ ಸಮಯದಲ್ಲಿ ಹೊರಗಿನ ಪ್ರಪಂಚದ ಚಿಂತೆಗಳು ಇರಲಿಲ್ಲ. ಕಣ್ಣು ತೆರೆದ ನಂತರ ಹೊಸ ಪ್ರಪಂಚವನ್ನು ಕಂಡೆ.

– ಹ್ಯುಮೇರಾ ಅಜಾಜ್, ವಿದ್ಯಾರ್ಥಿ, ಮದ್ರಸ–ಎ–ಜೈನಾಬ್, ಬೆಂಗಳೂರು

ವಾರ್ಷಿಕ ಫಲಿತಾಂಶದ ದಿನದಂದು ನಾನು ಬಹಳ ಆತಂಕದಲ್ಲಿದ್ದೆ. ಆಗ ಲೈಟ್ ಚಾನಲಿಂಗ್ ಮಾಡಿದೆ ಮತ್ತು ಶಾಂತಿ ಹಾಗೂ ನೆಮ್ಮದಿಯನ್ನು ಅನುಭವಿಸಿದೆ.

– ವಸೀಹಾ ಬಾನು, 7ನೇ ತರಗತಿ, ಎಂ.ಇ. 2 ಆಂಗ್ಲ ಶಾಲೆ, ಬೆಂಗಳೂರು

ನನಗೆ ಎಂದಾದರೂ ದುಃಖವಾದರೆ ನಾನು ಲೈಟ್ ಚಾನಲ್ ಮಾಡುತ್ತೇನೆ. ಲೈಟ್ ಚಾನಲ್ ಮಾಡಿದ ನಂತರ ನನ್ನ ದುಃಖ ದೂರವಾಗಿ, ಮನಸ್ಸು ಆಲೋಚನಾರಹಿತವಾಗುತ್ತದೆ.

– ಒಬ್ಬ ವಿದ್ಯಾರ್ಥಿ, ಕೆ.ಕೆ.ಆಂಗ್ಲ ಶಾಲೆ, ವರ್ತೂರು

ಈ ತಂತ್ರದ ಅಭ್ಯಾಸದ ನಂತರ ನಾನು ಹೊಸ ವ್ಯಕ್ತಿಯಾಗಿ ಬದಲಾದಂತೆ ಮತ್ತು ಸಕಾರಾತ್ಮಕಗೊಂಡಂತೆ ಅನಿಸುತ್ತದೆ.

– ಮಾನಸ, 9ನೇ ತರಗತಿ, ಮೆರಿಡಿಯನ್ ಶಾಲೆ, ಹೈದರಾಬಾದ್

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್ ಸೋಮಯಾಜಿ; ಅನು: ಪಾಂಡುರಂಗ**

ಮಾನವರು ಸಂತೋಷವನ್ನು ಹಂಚಿಕೊಳ್ಳಲು ಹಬ್ಬಗಳು ಒಂದು ಪ್ರಧಾನ ಅವಕಾಶಗಳಾಗಿವೆ. ತಮ್ಮ ಪ್ರಾಪಂಚಿಕ ಚಟುವಟಿಕೆಗಳಿಗೆ ವಿರಾಮ ನೀಡಿ, ಸಂತೋಷದಿಂದಿರುವ ಒಂದು ಒಟ್ಟಾರೆ ನಿರ್ಧಾರಕ್ಕೆ ಪ್ರತಿಯೊಬ್ಬರೂ ಬದ್ಧರಾಗಿದ್ದಾರೆ. ತಪೋನಗರ ನಿವಾಸಿಗಳು, ಎಲ್ಲರೂ ಕೂಡಿ ಸಂಭ್ರಮಿಸುವ ಇಂಥ ಅವಕಾಶಗಳನ್ನು ಎಂದೂ ತಪ್ಪಿಸಿಕೊಳ್ಳುವುದಿಲ್ಲ. ಅಕ್ಟೋಬರ್ ತಿಂಗಳು ಸಂಭ್ರಮಿಸಲು ಹಲವಾರು ಅವಕಾಶಗಳನ್ನು ತಂದುಕೊಟ್ಟಿತು. ಆಯುಧಪೂಜೆಯ ದಿನ ಮಧ್ಯಾಹ್ನ 12 ಗಂಟೆಗೆ ತಪೋನಗರ ನಿವಾಸಿಗಳು ತಮ್ಮ ವಾಹನಗಳನ್ನು ತಪೋವನದ ಬಳಿ ಇರುವ ವಾಹನ ನಿಲ್ದಾಣ ಸ್ಥಳದಲ್ಲಿ ನಿಲ್ಲಿಸಿದರು. ಗುರೂಜಿಯವರು ಮತ್ತು ನೆರೆದಿದ್ದ ನಿವಾಸಿಗಳು ಚೈತನ್ಯಗಳನ್ನು ವಾಹನಗಳಿಗೆ ಹರಿಸುವುದರ ಮೂಲಕ ವಾಹನಗಳನ್ನು ಚೈತನ್ಯೀಕರಿಸಿದರು. ನಂತರ ಅನಿರೀಕ್ಷಿತವಾಗಿ ಗುರೂಜಿಯವರೊಂದಿಗೆ ಗ್ರೂಪ್ ಫೋಟೋ ತೆಗೆಯಲಾಯಿತು. ನಿವಾಸಿಗಳ ಸಮೂಹ ದೊಡ್ಡದಾಗಿರುವುದರಿಂದ ಎಲ್ಲರ ಮುಖಗಳು ಚಿಕ್ಕಚಿಕ್ಕದಾಗಿದ್ದು, ಎಲ್ಲರೂ ಒಂದಾಗಿರುವಂತೆ ಗೋಚರಿಸುತ್ತಿತ್ತು. ಅದರ ಕೇಂದ್ರದಲ್ಲಿ ಬಿಳಿ ಬೆಳಕಿನಂತೆ ಗುರೂಜಿಯವರಿದ್ದು, ನಾವೆಲ್ಲರೂ ಅವರನ್ನು ಸುತ್ತುವರಿದಿದ್ದೆವು.

ದೀಪಾವಳಿ ಹಬ್ಬದ ಮರುದಿನ ನಿವಾಸಿಗಳೆಲ್ಲ ಉನ್ನತಿ ಎನ್‌ಕ್ಲೇವ್‌ನಲ್ಲಿ ಸೇರಿ ದೀಪಗಳ ಹಬ್ಬವನ್ನು ಆಚರಿಸಿ ಸಂಭ್ರಮಿಸಿದರು. ಮಕ್ಕಳ ಜೊತೆಗೆ, ದೊಡ್ಡವರೂ ಕೂಡಾ ಮಕ್ಕಳಂತೆ ಪಟಾಕಿಗಳನ್ನು ಸಿಡಿಸುತ್ತಿದ್ದರು. ತಪೋನಗರದ ಮಹಿಳೆಯರು ಪರಸ್ಪರರ ಉಡುಗೆ ತೊಡುಗೆ ಮತ್ತು ಆಭರಣಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರತಿಕ್ಷಣ ಯಾರಾದರೊಬ್ಬರು ಮತ್ತೊಬ್ಬರಿಗೆ ದೀಪಾವಳಿಯ ಶುಭಾಶಯವನ್ನು ಹಾರೈಸುತ್ತಿದ್ದರು. ಈ ಎಲ್ಲಾ ವ್ಯವಸ್ಥೆಗಳನ್ನು ಶ್ರೀಯುತ ಸ್ವಾಮಿನಾಥನ್ ಮತ್ತು ಕೃಷ್ಣ ಅಚ್ಚುಕಟ್ಟಾಗಿ ನಿರ್ವಹಿಸಿದ್ದರು.

ಶ್ರೀಯುತ ಸುಧಾಕರ್ ಮತ್ತು ಕುಟುಂಬದವರು ಉಪಹಾರ ವ್ಯವಸ್ಥೆಯನ್ನು ಮಾಡಿದ್ದರು. ಉಪಹಾರದ ಜೊತೆಗೆ ಪ್ರಾರಂಭವಾದ ಮಾತುಕತೆ, ಗುರೂಜಿಯವರ ಜೊತೆಗಿನ ಪೂರ್ವ ನಿಯೋಜಿತವಲ್ಲದ ಅನೌಪಚಾರಿಕ ಮಾತುಕತೆಗೆ ದಾರಿಮಾಡಿಕೊಟ್ಟಿತು. ಈ ಕಾರ್ಯಕ್ರಮ ರಾತ್ರಿ 9.40ರವರೆಗೆ ಸಾಗಿತ್ತು.

ಗುರೂಜಿಯವರು ಜೀವಶಕ್ತಿಯನ್ನು ಅಭಿವ್ಯಕ್ತಿಸುವುದರ ಮಹತ್ವದ ಬಗ್ಗೆ ತಿಳಿಸಿದ್ದಾರೆ. ಅವರು ಒಮ್ಮೆ, "ಜೀವನವನ್ನು ಸಂಭ್ರಮಿಸುವುದು, ಭೂಮಿಯ ಮೇಲೆ ದೇವರ ಉಪಸ್ಥಿತಿಯನ್ನು ಸಂಭ್ರಮಿಸಿದಂತೆ" ಎಂದು ಹೇಳಿದ್ದರು. ಇದಕ್ಕೆ ತಪೋನಗರ ನಿವಾಸಿಗಳು ನಿದರ್ಶನವಾಗಿದ್ದಾರೆ. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

02–10–2011

ಧ್ಯಾನಗಳು ಎಲ್ಲ ರೀತಿಯ ಸತ್ಯಗಳ ಅರಿವನ್ನು ಉಂಟುಮಾಡುತ್ತವೆ. ನಾವು ಧ್ಯಾನ ಮಾಡಲಾರಂಭಿಸಿ, ಮುಂದುವರಿದಾಗ ನಾವು ನಮ್ಮ ಜೀವನದಲ್ಲಿ ಮಾಡಿದ ಎಲ್ಲ ತಪ್ಪುಗಳ ಬಗ್ಗೆ ಅರಿಯುತ್ತೇವೆ. ಆದರೆ ಕೆಲವು ಸಲ ನಮ್ಮ ಬಿಗುವಾದ ಕ್ಷಮಾಪಣೆ ಕೇಳುವುದನ್ನು ತಡೆಯುತ್ತದೆ. ಕೆಲವರು ನಮ್ಮಿಂದ ಭೌತಿಕವಾಗಿ ಬಹಳ ದೂರವಿರುತ್ತಾರೆ, ಇನ್ನು ಕೆಲವರು ಹತ್ತಿರವಿದ್ದರೂ ಬಹಳ ದೂರವಿರುತ್ತಾರೆ. ಇಂಥ ಸಂದರ್ಭಗಳಲ್ಲಿ ನಾವು ವಿಶ್ವವನ್ನು ಕ್ಷಮಿಸುವಂತೆ ಕೇಳಿಕೊಳ್ಳಬಹುದು. ವಿಶ್ವವೇ ದೇವರು. ನಮ್ಮ ಸಂದೇಶ ಯಾವುದೋ ರೀತಿಯಲ್ಲಿ ಸಂಬಂಧಪಟ್ಟ ವ್ಯಕ್ತಿಗೆ ತಲುಪುತ್ತದೆ. ಸಂಪರ್ಕಿಸುವುದಕ್ಕೆ ನಾನಾ ರೀತಿಗಳಿವೆ. ನಾವು ಅನ್ವೇಷಣೆ ಮಾಡಬೇಕಷ್ಟೆ.

ನಿಮ್ಮ ಜಾಗೃತಿಯನ್ನು ವಿಶ್ವಕ್ಕೆ ಪ್ರಜ್ಞಾಪೂರ್ವಕವಾಗಿ ಬದಲಿಸುವುದರಿಂದ ನೀವು ವಿಶ್ವದೊಂದಿಗೆ ಸಂಭಾಷಿಸಬಹುದು. ವಿಶ್ವವನ್ನು ಪ್ರಾರ್ಥಿಸಿ, ಅದಕ್ಕೆ ಪ್ರೀತಿಯನ್ನು ಕಳುಹಿಸಿ, ಆಗ ನಿಮಗೆ ವಿಶ್ವದೊಂದಿಗೆ ಸಂಭಾಷಿಸಲು ಸಾಧ್ಯವಾಗುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರೂ ಇವುಗಳನ್ನು ಪ್ರಯತ್ನಿಸಬೇಕು.

ಹಸಿವಿನ ಬಗ್ಗೆ ನೀವು ಪುಸ್ತಕದಲ್ಲಿ ಓದಿರಬಹುದು, ಆದರೆ ನೀವು ನಿಜವಾಗಿ ಹಸಿದಿರುವ ವ್ಯಕ್ತಿಯನ್ನು ಸಂಧಿಸಿದಾಗ ಅದರ ಮಹತ್ವ ತಿಳಿಯುತ್ತದೆ. ನಮಗೆ ಸತ್ಯ ಮತ್ತು ಅದನ್ನು ಬಿಡದೆ ಹಿಂಬಾಲಿಸಿ ಹೋಗುವುದು ಮುಖ್ಯ.

ಒಬ್ಬ ವ್ಯಕ್ತಿ ಹೇಳಿದರು, 'ನಾನು ಉದ್ಯೋಗವನ್ನು ಬಿಟ್ಟು ಧ್ಯಾನಾಭ್ಯಾಸ ತೆಗೆದುಕೊಳ್ಳುತ್ತೇನೆ.' ನೀವು ನಿಖರವಾದ ಯೋಜನೆ ಮತ್ತು ಸ್ಪಷ್ಟವಾದ ಗುರಿ ಹೊಂದಿರಬೇಕು. ಉದ್ಯೋಗವನ್ನು ಬಿಟ್ಟು ಜೀವನ ಮಾಡಬಲ್ಲಿರಿ ಎಂದೆನಿಸಿದರೆ ಮಾತ್ರ ಅದನ್ನು ಬಿಡಿ, ಆತುರದ ನಿರ್ಧಾರ ಕೈಗೊಳ್ಳಬೇಡಿ. ಆಧ್ಯಾತ್ಮಿಕತೆಯ ಸಾರ ಎಂದರೆ ನೈಜವಾಗಿರುವುದು, ಕೇವಲ ರಂಜನಾತ್ಮಕವಾಗಿ ಅಲ್ಲ.

ನೀವು ಪರಿಶುದ್ಧ ಹಾಗೂ ದೃಢವಾಗಿದ್ದರೆ, ಒಬ್ಬ ಕಳ್ಳ ಅಥವಾ ಕೊಲೆಗಾರ ತಯಾರಿಸಿದ ಆಹಾರ ತೆಗೆದುಕೊಳ್ಳುವುದರಿಂದ ನಿಮಗೆ ಏನೂ ಆಗುವುದಿಲ್ಲ. ನೀವು ಒಬ್ಬ ಧ್ಯಾನಿ ಹಾಗೂ ದೃಢಮನಸ್ಕರು ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಿ.

ಒಬ್ಬ ವ್ಯಕ್ತಿಯಿಂದ ದೀರ್ಘವಾದ ಮೇಲ್ ಬಂದಿದ್ದು ಅದರಲ್ಲಿ ಅವರು ತಮ್ಮ ಮನೆಯಲ್ಲಿನ ಸಮಸ್ಯೆಗಳನ್ನು ವಿವರಿಸಿದ್ದರು. ನಾವು ಅವರ ಸಮಸ್ಯೆಗಳ ಪರಿಹಾರದ ಬಗ್ಗೆ ಗಮನ ಹರಿಸಿದೆವು. ಅಂತಿಮವಾಗಿ ಅವರು ಬರೆದರು: 'ನಾನು ನನ್ನ ಪತ್ನಿಗೆ ಧ್ಯಾನವನ್ನು ಕೈಗೊಳ್ಳಲು ಹೇಳುತ್ತಿದ್ದೇನೆ. ಆದರೆ ಅವಳು ಅದನ್ನು ಒಪ್ಪುತ್ತಿಲ್ಲ.' ತಮ್ಮ ಬಗ್ಗೆ ಏನು? ಅವರು ತಮ್ಮ ಪತ್ನಿ ತಿದ್ದಿಕೊಳ್ಳಬೇಕೆಂದು ಯೋಚಿಸುತ್ತಾರೆಯೇ ಹೊರತು ತಮ್ಮ ಬಗ್ಗೆ ಅಲ್ಲ!

ಇಟಲಿಯಿಂದ ನಮಗೆ ತಿಳಿದ ಒಬ್ಬ ವ್ಯಕ್ತಿಯೊಬ್ಬರು ನ್ಯೂಯಾರ್ಕ್‌ನಲ್ಲಿ ಕೋಮಾದಲ್ಲಿದ್ದ 14 ವರ್ಷದ ಒಬ್ಬ ಹುಡುಗನನ್ನು ಗುಣಪಡಿಸುವಂತೆ ನನ್ನನ್ನು ಕೇಳಿಕೊಂಡರು. ನಾನು ಋಷಿಗಳನ್ನು ಪ್ರಾರ್ಥಿಸಿದೆ. ಆ ಹುಡುಗ ಸಾಮಾನ್ಯ ಸ್ಥಿತಿಗೆ ಬರುತ್ತಿದ್ದಾನೆಂದು ಅವರು ತಿಳಿಸಿದರು. ಋಷಿಗಳು ಮತ್ತು ದೇವರಿಂದ ಎಲ್ಲವೂ ಸಾಧ್ಯ. ಆದ್ದರಿಂದ ನಾವು ಹಿಂದೆಮುಂದೆ ನೋಡದೆ ಋಷಿಗಳೊಂದಿಗೆ ಶೃತಿಗೊಳ್ಳೋಣ. ಆಗ ನಮ್ಮ ಜೀವನ ಸದಾ ಮುಗುಳ್ನಗೆಯಿಂದ ಕೂಡಿರುತ್ತದೆ.

09–10–2011

ನಮ್ಮ ವಿದ್ಯಾರ್ಥಿಗಳಲ್ಲೊಬ್ಬರು, ಒಬ್ಬ ಪ್ರಖ್ಯಾತ ಮತ್ತು ಮಹಾನ್ ಬೆಳಕಿನ ಕಾರ್ಯಕರ್ತರ ಭಾಷಣದ ಟಿಪ್ಪಣಿ ಮಾಡಿಕೊಂಡು ನನಗೆ ಕಳುಹಿಸಿಕೊಟ್ಟರು. ನಾನು ಕೆಲವು ಅಂಶಗಳನ್ನು ಸ್ಪಷ್ಟಪಡಿಸಲು ಬಯಸುತ್ತೇನೆ:

ಬಹುತೇಕ ಬೆಳಕಿನ ಕಾರ್ಯಕರ್ತರ ಜ್ಞಾನದ ಮೂಲ, ಅವರು ಯಾವ ಗ್ಯಾಲಕ್ಸಿಯಿಂದ ಬಂದಿರುತ್ತಾರೋ ಅಲ್ಲಿಂದ ಆಗಿರುತ್ತದೆ. ಅವರು ಅದ್ಭುತ ಜ್ಞಾನವನ್ನು ಸಂಗ್ರಹಿಸಿದ್ದಾರೆ. ಆದರೆ ನಮಗೆ ಅತ್ಯುನ್ನತ ಮೂಲವಾದ ಸಪ್ತಋಷಿಗಳಿಂದ ಜ್ಞಾನ ಬರುತ್ತದೆ. ಪ್ರತಿಯೊಂದು ಭೂಮಿಯ ಮೇಲ್ವಿಚಾರಣೆ ಒಬ್ಬೊಬ್ಬ ಋಷಿಯದು. ನಮ್ಮ ಭೂಮಿಯ ಮೇಲ್ವಿಚಾರಣೆ ಮಾಡುತ್ತಿರುವವರು ಅತ್ರಿ ಮಹರ್ಷಿ. ಅವರು ನೇರವಾಗಿ ಸಪ್ತಋಷಿಗಳಡಿ ಇದ್ದಾರೆ. ಪ್ರತಿ ಗ್ಯಾಲಕ್ಸಿ ಒಂದು ಬೆಳಕಿನ ಪರಿಷತ್ತನ್ನು ಹೊಂದಿರುತ್ತದೆ. ಈ ಪರಿಷತ್ತು ಗ್ರೇಟ್ ಮಾಸ್ಟರ್‌ಗಳು, ಋಷಿಗಳು ಮತ್ತು ದೈವಿಕ ವ್ಯಕ್ತಿಗಳಿಂದ ಕೂಡಿರುತ್ತದೆ. ಪರಮೋನ್ನತ ಸ್ಥಾನದಲ್ಲಿರುವ ಸಪ್ತಋಷಿಗಳಿಗೆ ಈ ಪರಿಷತ್ತುಗಳು ವರದಿಗಳನ್ನು ಸಲ್ಲಿಸುತ್ತವೆ ಮತ್ತು ಅವರಿಂದ ಸೂಚನೆ ಸಲಹೆಗಳನ್ನು ಪಡೆಯುತ್ತವೆ.ಈ ಭೂಮಿ ಜೀವನಕ್ಕೆ ಸಿದ್ಧವಾದಾಗ, ನಾವು ಇಲ್ಲಿಗೆ ಬಂದ ಧ್ಯೇಯ ಜೀವನವನ್ನು ಅನುಭವಿಸುವುದಕ್ಕೆ ಹೊರತು ಕೆಲವು ಬೆಳಕಿನ ಕಾರ್ಯಕರ್ತರು ಹೇಳಿರುವಂತೆ ಕಲಿಯಲು ಅಲ್ಲ. ನಾವು ಕೆಳಗಿಳಿದು ನೇರವಾಗಿ ಮಾನವ ಜನ್ಮವನ್ನು ಪಡೆದಿದ್ದೇವೆ. ಆದರೆ ಕೆಲವರು, ನಾವು ಕೆಳಮಟ್ಟದ ಜೀವಿಗಳ ಬದುಕಿನ ಅನುಭವಗಳನ್ನು ಪಡೆದ ನಂತರ ನಾವು ಮಾನವ ಜೀವಿಗಳಾಗಿ ಹುಟ್ಟುತ್ತೇವೆ, ಎಂದು ತಪ್ಪಾಗಿ ಭಾವಿಸುತ್ತಾರೆ. ಕೆಲವರ ನಂಬಿಕೆಯಂತೆ ಈ ಭೂಮಿಯ ಮೇಲೆ ಮಾತ್ರವಲ್ಲ ಇಡೀ ಸೃಷ್ಟಿಯಲ್ಲಿ ಇಚ್ಛಾಸ್ವಾತಂತ್ರ್ಯವಿದೆ. ಆತ್ಮಸಂಗಾತಿಗಳಿದ್ದಾರೆ, ಆದರೆ ಅವರ ನಡುವೆ ಒಪ್ಪಂದಗಳಿವೆ ಎಂದು ನಾನು ಭಾವಿಸುವುದಿಲ್ಲ.

ಪ್ರಾಮಾಣಿಕವಾದ ಬಂಧವಿದ್ದರೆ, ನಾವು ಪ್ರೀತಿಸುವ ಜನರನ್ನು ಎಂದಾದರೊಂದು ದಿನ ಸಂಧಿಸುತ್ತೇವೆ.

ನಾವು ಧ್ಯಾನವನ್ನು ದೃಢತೆಯಿಂದ ಮಾಡುತ್ತ ಮುಂದುವರಿಸಿದಂತೆ, ಅತ್ಯುನ್ನತ ಜ್ಞಾನವನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುತ್ತೇವೆ. ಎಲ್ಲ ಜ್ಞಾನ ಕೆಳಗಿಳಿದು ಬರುವುದಕ್ಕಾಗಿಯೇ ಇದೆ. ನಾವು ಬೆಳೆದಂತೆ ವಿಶ್ವ ಸ್ವಲ್ಪಸ್ವಲ್ಪವೇ ಜ್ಞಾನ ನೀಡುತ್ತದೆ.

ಈ ಭೂಮಿ ಪರಿವರ್ತನೆಯ ಮಹತ್ತರ ಬದಲಾವಣೆಗಳಿಗೆ ಈಗ 28ನೇ ಬಾರಿ ಒಳಗಾಗಿದೆ. ಋಷಿಗಳು ಇವನ್ನೆಲ್ಲ ಕಂಡಿದ್ದಾರೆ. ಅವರು ಈ ಮಹತ್ತರ ಬದಲಾವಣೆಗಳ ಮೂಲಕ ಮನುಕುಲವನ್ನು ಮುಂದೊಯ್ಯಲು ಜನರಿಗೆ ತರಬೇತಿ ಕೊಟ್ಟಿದ್ದಾರೆ. ಅವರು ಯೋಜನೆಗಳನ್ನು ಹೊಂದಿದ್ದಾರೆ, ಅವರು ಸಿದ್ಧರಾಗಿದ್ದಾರೆ ಮತ್ತು ಆತ್ಮವಿಶ್ವಾಸದಿಂದ ಕೂಡಿದ್ದಾರೆ.

ಒಬ್ಬ ವ್ಯಕ್ತಿ ತಮ್ಮನ್ನು ತಾವು ಒಂದು ದೇವಸ್ಥಾನದಲ್ಲಿ ಕಂಡರು. ಆಕೆ ದೇವರ ವಿಗ್ರಹ ಇರುವಲ್ಲಿ ಬೆಳಕನ್ನು ನೋಡಿದರು. ಅರ್ಚಕರಿಂದ ಪಡೆದ ತೀರ್ಥ ಕೂಡಾ ಬೆಳಕಾಗಿ ಕಂಡಿತು. ಆಕೆ ಎಲ್ಲ ಕಡೆ ಬೆಳಕನ್ನು ಕಂಡರು ಮತ್ತು ಜನರನ್ನು ಕೂಡಾ ಬೆಳಕಾಗಿ ಕಂಡರು. ಇದು, ದೇವರು ಎಂದರೆ ಬೆಳಕು ಎಂಬುದನ್ನು ಸೂಚಿಸುತ್ತದೆ. ಇದೊಂದು ಅದ್ಭುತ ಅನುಭವ.

ನಾವು ಬಲವಾದ ನಕಾರತೆಯನ್ನು ದೀರ್ಘ ಕಾಲದವರೆಗೆ ಹೊಂದಿದ್ದರೆ, ಅದು ಬಹಳ ಗಂಭೀರವಾದ ಕಾಯಿಲೆಯಾಗಿ ಕಾಣಿಸಿಕೊಳ್ಳುತ್ತದೆ.

ಬದಲಾವಣೆಗಳನ್ನು ಸ್ವಾಗತಿಸೋಣ ಮತ್ತು ಅವು ಶಾಶ್ವತವಾಗಿರಲಿ. ನೀವು ಒಬ್ಬ ವ್ಯಕ್ತಿ, ಒಂದು ಕುಟುಂಬ ಅಥವಾ ಒಂದು ಗುಂಪಿನ ಬಗ್ಗೆ ಜವಾಬ್ದಾರಿ ತೆಗೆದುಕೊಂಡು ಪ್ರೀತಿ ತೋರಿಸಿದರಷ್ಟೇ ಸಾಕು. ಅದು ನೀವು ಬೆಳಕಿನ ಯುಗಕ್ಕೆ ತ್ವರಿತ ಗತಿಯಲ್ಲಿ ಮುನ್ನಡೆಯಲು ನೆರವಾಗುತ್ತದೆ ಮತ್ತು ನೀವು ವಿಶ್ವದ ಒಂದು ಭಾಗವಾಗಿ ಬಿಡುತ್ತೀರಿ. ಹೀಗೆ ನಾವು ಬದಲಾಗುವುದರಿಂದ ಮತ್ತು ವಿಶ್ವಾತ್ಮಕವಾಗುವುದರಿಂದ ಪ್ರಪಂಚವನ್ನೇ ಬದಲಾಯಿಸಬಹುದು.

16–10–2011

ಋಷಿಗಳಡಿ ನಾವು ಕಾರ್ಯ ಕೈಗೊಂಡ ಮೇಲೆ, ನಾವು ಮಾಡಬೇಕಾದ ಕೆಲಸವನ್ನು

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

ಮಾಡಲೇಬೇಕು. ಈಗ ಮಾಡಲೇಬೇಕಾದ ಕೆಲಸವೆಂದರೆ ಧ್ಯಾನ ಹೇಳಿಕೊಡುವುದು, ಧ್ಯಾನಿಗಳಿಗೆ ತರಬೇತಿ ಕೊಡುವುದು ಮತ್ತು ಸಾಧ್ಯವಾದ ಎಲ್ಲ ರೀತಿಯಿಂದ ಸಾಧನೆಗೆ ಸಹಾಯ ಮಾಡುವುದು. ಎಲ್ಲ ಲೈಟ್ ಚಾನಲ್‌ಗಳು ಅದ್ಭುತವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಚಾನಲಿಂಗ್‌ಗೇ ಬದ್ಧರಾಗಿರಿ. ಇನ್ನೊಬ್ಬರ ವೈಯಕ್ತಿಕ ಜೀವನದಲ್ಲಿ ಮಧ್ಯ ಪ್ರವೇಶ ಮಾಡಬೇಡಿ.

'ಆನಂದ' ಪರಬ್ರಹ್ಮಲೋಕದ ವಾತಾವರಣ. ಅದನ್ನು ನಾವು ನಮ್ಮ ಆನಂದಮಯಕೋಶದಲ್ಲಿ ಹೊಂದಿರುತ್ತೇವೆ. 'ಆನಂದ' ಒಂದು 'ಇರುವಿಕೆಯ' ಸ್ಥಿತಿ.

ದೇವರು ಮೊದಲು ಬೆಳಕಾಗಿ, ನಂತರ ಪ್ರಜ್ಞೆಯಾಗಿ ಅಭಿವ್ಯಕ್ತಗೊಂಡನು. ಈ ಬ್ರಹ್ಮಾಂಡದಲ್ಲಿ ಕೋಟಿಗಟ್ಟಲೆ ಗ್ಯಾಲಕ್ಸಿಗಳು, ವಿವಿಧ ಲೋಕಗಳು ಬೃಹತ್ತಾದ ವಿಸ್ತಾರದಲ್ಲಿ ಹರಡಿಕೊಂಡಿವೆ. ಅದರಲ್ಲಿ ಬರಿದಾದ ಹೆಚ್ಚಿನ ಸ್ಥಳಾವಕಾಶವಿದೆ. ಅದು ಪ್ರಜ್ಞೆಯ ಸಾಗರವಾಗಿದ್ದು, ಅಮೂರ್ತದ ಭಾಗವಾಗಿದೆ. ಈ ಪ್ರಜ್ಞೆಯ ಸಾಗರದಲ್ಲಿ 'ಆನಂದ'ವಿದೆ. ಇದು ಪರಬ್ರಹ್ಮಲೋಕದ 'ಆನಂದ' ಅಲ್ಲದಿರಬಹುದು, ಆದರೂ ಬಹಳ ಮಹತ್ವದ್ದಾಗಿದೆ. ಪ್ರಜ್ಞೆಯ ಈ ಸ್ಥಳಾವಕಾಶದಲ್ಲಿ ಸೃಷ್ಟಿ ಮತ್ತು ವಿನಾಶಗಳು ಸಂಭವಿಸುವುದಿಲ್ಲ. ಅದೊಂದು ದ್ವಂದ್ವಗಳಿಲ್ಲದ ಪರಿಪೂರ್ಣ ಸಮತ್ವದ ಸ್ಥಿತಿ. ಬಹುಶಃ ಇದನ್ನು ವಿಜ್ಞಾನಿಗಳು ಕಪ್ಪುವಸ್ತು ಎಂದು ವರ್ಣಿಸುತ್ತಾರೆ, ಆದರೆ ಇದು ಸಂಪೂರ್ಣ ತಪ್ಪು. ಇದು ಒಂದು ಅಭಿವ್ಯಕ್ತಗೊಳ್ಳದ ಭಾಗ.

ನಾವು ಈ ಪ್ರಜ್ಞಾಸಾಗರ ಅಥವಾ 'ಆನಂದ' ಸಾಗರಕ್ಕೆ ಶ್ರುತಿಗೊಳ್ಳಲು ಸಾಧ್ಯವಾದರೆ, ನಾವು ಅತ್ಯುನ್ನತ ಸಮಾಧಿಯನ್ನು ಅನುಭವಿಸಬಹುದು, ಅಮರತ್ವವನ್ನು ಗಳಿಸಬಹುದು ಮತ್ತು ನಾವು ಅತ್ಯುತ್ತಮ ಆರೋಗ್ಯ ಹೊಂದಬಹುದು. ನಾವು ಕಾಲದಿಂದ ಪ್ರಭಾವಿತರಾಗುವುದಿಲ್ಲ.

ನಾವು ಪ್ರಕೃತಿಯನ್ನು ಅಥವಾ ಸಂತೋಷವನ್ನು ಅನುಭವಿಸುವಾಗ, ದುಃಖದ ಛಾಯೆ ಕಂಡುಬರುತ್ತದೆ, ಏಕೆಂದರೆ ನಮಗೆ ಈ ಕ್ಷಣ ಅಲ್ಪಕಾಲದ್ದೆಂದು ಅದು ಹೇಗೋ ತಿಳಿದಿರುತ್ತದೆ. ಇದು ಇಡೀ ಸೃಷ್ಟಿಯೇ ಅಲ್ಪಕಾಲಿಕ ಎಂಬುವುದನ್ನು ಅರಿಯಲು ನಮಗೆ ಸಹಾಯ ಮಾಡುತ್ತದೆ. ಆನಂದದ ಸ್ಥಿತಿ ಇವೆಲ್ಲವನ್ನು ಮೀರಿದ್ದು. ಋಷಿಗಳು ಸುಖದುಃಖವಿರದ ಈ ಸ್ಥಿತಿಯಲ್ಲಿ ಯಾವಾಗಲೂ ಜೀವಿಸುತ್ತಾರೆ. ಇದು ದೈವಿಕತೆಯೊಂದಿಗೆ ಇರುವ ಪರಿಪೂರ್ಣ ಸಾಮರಸ್ಯದ ಒಂದು ಸ್ಥಿತಿ.

ನಾವು ದೇವರನ್ನು ನಂಬಿದರೆ, ನಾವು ಜೀವನದ ಇಡೀ ಪ್ಯಾಕೇಜನ್ನು ಒಪ್ಪಿಕೊಳ್ಳಬೇಕು, ಕೇವಲ ಸುಖದ ಭಾಗವನ್ನು ಮಾತ್ರವಲ್ಲ, ನಮ್ಮನ್ನು ಬದಲಿಸಿಕೊಳ್ಳಲು ಪ್ರಯತ್ನಿಸಬೇಕು ಮತ್ತು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು.

ನೋವಿನ ಸಂದರ್ಭಗಳನ್ನು ನೀವು ನಿಮ್ಮದೇ ಆದ ರೀತಿಯಲ್ಲಿ ನಿಭಾಯಿಸಿಕೊಳ್ಳಬೇಕು. ಆದರೆ ಇಂಥ ಸಂದರ್ಭದಲ್ಲಿರುವ ಒಬ್ಬ ವ್ಯಕ್ತಿ ಕೋಪದಿಂದ ನನಗೆ ಬರೆಯುತ್ತ, 'ಋಷಿಗಳು ಎಲ್ಲಿ ಇದ್ದಾರೆ?' ಎಂದು ಪ್ರಶ್ನಿಸಿದರು. ನಾವು ನಮ್ಮ ವೈಫಲ್ಯಗಳನ್ನು ಒಪ್ಪಿಕೊಳ್ಳದೆ, ಜೀರ್ಣಿಸಿಕೊಳ್ಳಲಾಗದೇ ಇದ್ದಾಗ ಇಂಥ ಉದ್ಗಾರಗಳನ್ನು ಉಪಯೋಗಿಸುತ್ತೇವೆ.

ವಾರ್ತಾ ಪತ್ರದಲ್ಲಿ ವಿದ್ಯಾರ್ಥಿಗಳ ಅನುಭವಗಳನ್ನು ಓದಿದಾಗಲೆಲ್ಲಾ ತಮಗೆ ತುಂಬಾ ಅಸಂತೋಷವಾಗುತ್ತದೆ ಎಂದು ಒಬ್ಬಾಕೆ ಹೇಳಿದರು. ಆಕೆ, 'ನನ್ನನ್ನು ಋಷಿಗಳು ತ್ಯಜಿಸಿ ಬಿಟ್ಟಿದ್ದಾರೆ' ಎಂದರು. ನಾನು ಆಕೆಗೆ ಹೇಳಿದೆ, 'ನೀವು ಧ್ಯಾನಗಳನ್ನು ತ್ಯಜಿಸಿದ್ದೀರಿ. ಆದರೆ ಋಷಿಗಳು ಎಂದಿಗೂ ನಿಮ್ಮನ್ನು ತ್ಯಜಿಸುವುದಿಲ್ಲ.'

ಒಬ್ಬ ವ್ಯಕ್ತಿ ತನಗೆ ಮರುಮಾಹಿತಿಯಾಗಲಿ ಅಥವಾ ಮಾರ್ಗದರ್ಶನವಾಗಲಿ ಸಿಗುತ್ತಿಲ್ಲ ಎಂದು ದೂರಿದರು. ಈ ಒಂದು ಮಾರ್ಗದಲ್ಲಿ ಮಾತ್ರ ನಿಮ್ಮ ಧ್ಯಾನಾಭ್ಯಾಸವನ್ನು ಪರಿಶೀಲಿಸುವುದು ಮತ್ತು ನೀವು ಒಬ್ಬ ಹಿರಿಯ ಮಾರ್ಗದರ್ಶಕರನ್ನಾಗಲಿ ಅಥವಾ ನನ್ನನ್ನು ನೇರವಾಗಿ ಸಂಪರ್ಕಿಸಬಹುದು ಹಾಗೂ ಮಾರ್ಗದರ್ಶನ ಮತ್ತು ಸಹಾಯ ಪಡೆಯಬಹುದು. ಹೀಗಿರುವಾಗ ಈ ರೀತಿಯ ದೂರು ವಿಷಾದಕರ. ನಾನು ಆಕೆಗೆ ಬೇರೆ ಯಾವುದಾದರೂ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವಂತೆ ಸಲಹೆ ಮಾಡಿದೆ. ಈ ಕೆಲಸ ಒಂದು ಪ್ಯಾಕೇಜ್. ಅದರೊಡನೆ ಬರುವುದೆಲ್ಲವನ್ನು ನಾವು ಒಪ್ಪಿಕೊಳ್ಳಬೇಕು.

### 23–10–2011

ನಾವು ಅನುಭವಿಸುವ ಬೆಳಕು ನಮ್ಮ ಉನ್ನತ ಆತ್ಮ, ಆತ್ಮಗಳ ಆತ್ಮ ಎಂಬುದನ್ನು ನಾವು ಅರಿಯಬೇಕು. ಅದನ್ನು ನಾವು ಕೇವಲ ಬೆಳಕೆಂದು ಅನುಭವಿಸಲು ಪ್ರಯತ್ನಿಸಿದರೆ ನಾವು ಏನನ್ನೂ ಸಾಧಿಸುವುದಿಲ್ಲ. ಇದೇ ರೀತಿ ಶಂಬಲದ ನಿಯಮಗಳನ್ನು ಅಭ್ಯಾಸ ಮಾಡುವಾಗ, ನಾವು ಚಿನ್ನದ ಬಣ್ಣದ ಬೆಳಕು ಅಥವಾ ಬಿಳಿಯ ಬೆಳಕನ್ನು ಹೊರತರುತ್ತೇವೆ. ನಾವು ಬೆಳಕು ಸಂಪೂರ್ಣ ಜೀವಂತಿಕೆಯುಳ್ಳದ್ದು, ಅದಕ್ಕೆ ಒಂದು ಅಸ್ತಿತ್ವವಿದೆ ಎಂದು ಅರಿತಾಗ ಸುಲಭವಾಗಿ ಸಂಪರ್ಕ ಸ್ಥಾಪನೆಯಾಗುತ್ತದೆ.

ಋಷಿಗಳು, ದೇವರು ಅಥವಾ ನನ್ನ ಮಾತುಗಳನ್ನು ನಂಬದಿರಲು ನೀವು ಸ್ವತಂತ್ರರು. ಆಧ್ಯಾತ್ಮಿಕವಾಗಿ ಬೆಳೆಯಲು ನಿಮ್ಮಲ್ಲಿ ನಿಮಗೆ, ನಿಮ್ಮ ಅಂತರ್–ಗ್ರಹಣ–ಶಕ್ತಿಯಲ್ಲಿ ಮತ್ತು ಬುದ್ಧಿಶಕ್ತಿಯಲ್ಲಿ ನಂಬಿಕೆ ಇದ್ದರೆ ಸಾಕು. ನಿಮ್ಮ ಗುರಿಯ ಅನ್ವೇಷಣೆಯಲ್ಲಿ ಮತ್ತು ನಿಮ್ಮ ಪ್ರಯತ್ನಗಳಲ್ಲಿ ಪ್ರಾಮಾಣಿಕರಾಗಿದ್ದರೆ ನೀವು ಗುರಿಯನ್ನು ಸಾಧಿಸುವಿರಿ. ನೀವು ಒಪ್ಪಿದ್ದನ್ನು ಮತ್ತು ನಂಬಿರುವುದನ್ನು ಅನುಸರಿಸಿ. ಅದನ್ನು ನೀವು ಆಚರಣೆಗೆ ತರಬೇಕು, ಆಗ ನಿಮ್ಮ ಗುರಿಯನ್ನು ಸಾಧಿಸುವಿರಿ.

ಕೇವಲ ಎರಡು ತಿಂಗಳಿನಿಂದ ಈ ಮಾರ್ಗದಲ್ಲಿ ಇರುವ ವಿದ್ಯಾರ್ಥಿಯೊಬ್ಬರು ದೀರ್ಘವಾದ ಮೇಲ್ ಬರೆದರು. ಋಷಿಗಳು, ಧ್ಯಾನಗಳು, ನಾವು ಕೆಲಸ ಮಾಡುವ ರೀತಿ, ಎಲ್ಲವನ್ನು ಅವರು ಅರ್ಥಮಾಡಿಕೊಂಡಿದ್ದಾರೆ. ನಾವು ನಮ್ಮ ಕಣ್ಣುಗಳನ್ನು ತೆರೆದಾಗಷ್ಟೇ ಎಲ್ಲವನ್ನು ನೋಡುತ್ತೇವೆ; ನಮ್ಮ ಹೃದಯ ತೆರೆದಾಗಷ್ಟೇ ಅರ್ಥಮಾಡಿಕೊಳ್ಳುತ್ತೇವೆ ಮತ್ತು ಪಡೆಯುತ್ತೇವೆ.

ನಾವು ಇಲ್ಲಿ ಮಾತ್ರವೇ ಅಲ್ಲ, ಎಲ್ಲ ಕಡೆಗಳಲ್ಲಿಯೂ ಪ್ರಯತ್ನಿಸಬೇಕು ಮತ್ತು ಹೆಚ್ಚು ಸಹನೆಯಿಂದ ಕೂಡಿರಬೇಕು. ಅತ್ಯಲ್ಪ ಕಾಲದಲ್ಲಿ ನಾವು ಮುಕ್ತಿ ಪಡೆಯಲು ಸಾಧ್ಯವಿಲ್ಲ. ಬಹುಶಃ ಒಂದು ಮಾರ್ಗದಿಂದ ಇನ್ನೊಂದು ಮಾರ್ಗಕ್ಕೆ ಹಾರುವುದರಿಂದ ಪ್ರಯೋಜನವಿಲ್ಲ.

ಜನರ ನಡುವೆ, ಅದರಲ್ಲಿಯೂ ನನ್ನ ಮತ್ತು ಬೇರೆಯವರೊಂದಿಗೆ ಎರಡು ರೀತಿಯ ಅಂತರಗಳಿವೆ. ಒಂದು ನನ್ನಿಂದ ಮತ್ತು ಇನ್ನೊಂದು ಬೇರೆಯವರಿಂದ. ನನ್ನಿಂದ ಇತರರೊಂದಿಗೆ ಅಂತರ ಸಮಾನ ಇರುತ್ತದೆ, ಅಂದರೆ ಅಂತರವಿರುವುದಿಲ್ಲ. ಪ್ರತಿಯೊಬ್ಬರೂ ನನಗೆ ಹತ್ತಿರವೇ. ನೀವು ಇದನ್ನು ಅನುಭವಿಸಬೇಕು ಅಷ್ಟೆ. ಆದರೆ ಜನರಿಂದ ಈ ಅಂತರ ಕಾಲಕಾಲಕ್ಕೆ ವ್ಯತ್ಯಾಸವಾಗುತ್ತದೆ. ಇದರಿಂದ ನಾನು ವಿಚಲಿತನಾಗುವುದಿಲ್ಲ.

ನಾವು ಜನರಿಂದ ಕಾಣಿಕೆಗಳನ್ನು ಪಡೆದಾಗ ಮಾತ್ರ, ಬಹುಶಃ ಷರತ್ತುಗಳು ಮತ್ತು ನಕಾರಾತ್ಮಕ ಭಾಗ ಕಾಣಿಸಿಕೊಳ್ಳುತ್ತವೆ. ಕೆಲವು ಸಲ ನಮ್ಮ ಕರ್ಮಗಳು ಕೂಡಾ ಕಾಣಿಕೆಗಳನ್ನು ತರುತ್ತವೆ. ಆದರೆ ದೇವರಿಂದ ಕಾಣಿಕೆ ಬಂದಾಗ ಯಾವ ಷರತ್ತುಗಳಿರುವುದಿಲ್ಲ, ಆ ಕಾಣಿಕೆಯನ್ನು ಸ್ವೀಕರಿಸಿ, ಸುಖ ಪಡಿ ಮತ್ತು ಸಂತೋಷವಾಗಿರಿ.

ನೀವು ಈ ಮಾರ್ಗದಲ್ಲಿ ಮೂರು ಮುಖ್ಯ ಮಾತುಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕೆಂದು ಬಯಸುತ್ತೇನೆ– ಧ್ಯಾನಿಸಿ, ಸಕಾರಾತ್ಮಗೊಳ್ಳಿ ಮತ್ತು ಲೈಟ್‌ಚಾನಲ್ ಮಾಡಿ. ಇವೆಲ್ಲವನ್ನು ಅಭ್ಯಾಸ ಮಾಡಿದರೆ ನೀವೊಬ್ಬ ದೇವ ಪುರುಷರಾಗುವಿರಿ. ನೀವು ಅವುಗಳಲ್ಲಿ ಯಾವುದಾದರೂ ಒಂದನ್ನು ಅಭ್ಯಾಸ ಮಾಡಿದರೂ ಉತ್ತಮ ಮಾನವರಾಗುವಿರಿ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

(ಸಂ: ಶೋಭಾ ಕೆ. ರಾವ್; ಅನು: ಸುಧಾಕರ್)

ನಮಗೆ ಸಹಾಯ ಮಾಡಲು ಮತ್ತು ಸದಾಕಾಲ ನಮ್ಮೊಂದಿಗಿರಲು ಮಾನಸ ಫೌಂಡೇಶನ್ ಎಲ್ಲಿಲ್ಲದ ಆಸಕ್ತಿ ತೋರಿಸುತ್ತದೆ. ನೀವು ನಮ್ಮನ್ನು ಬೆಳಕಿಗೆ ಪರಿಚಯಿಸಿದ್ದೀರಿ. ಮಾನಸದ ಮಾರ್ಗದರ್ಶನ ವ್ಯವಸ್ಥೆ ಮತ್ತು ಹಂತಗಳ ಪರಿಕಲ್ಪನೆ ನಮ್ಮನ್ನು ಪ್ರೋತ್ಸಾಹಿಸುತ್ತದೆ. ಋಷಿಗಳಿಂದ ತಕ್ಷಣ ಸಿಗುವ ಸಹಾಯ, ಈ ಕಾಲದಲ್ಲಿ ಇನ್ನೆಲ್ಲಿಯೂ ಕಾಣಲು ಸಾಧ್ಯವಿಲ್ಲ. ನೀವು ಎಲ್ಲವನ್ನೂ ಸರಳಗೊಳಿಸುತ್ತೀರಿ ಮತ್ತು ಜೀವನವನ್ನು ಹೆಚ್ಚು ಸುಂದರವಾಗಿಸುತ್ತೀರಿ. ಈಗ ನಾನು ಜೀವನದ ಪ್ರತಿಯೊಂದು ಕ್ಷಣವನ್ನೂ ಪ್ರೀತಿಯಿಂದ ಕಾಣುತ್ತೇನೆ. ಬಹುಶಃ ಮಾನಸದ ಒಂದು ಸಣ್ಣ ಭಾಗವಾಗುವುದಕ್ಕಾಗಿಯೇ ನಾನು ಜನ್ಮವೆತ್ತಿರಬಹುದು.

– ಜಸ್‌ಪ್ರೀತ್ ಕೌರ್

ಎರಡು ವರ್ಷಗಳು ಅಧ್ಯಯನ ಕೇಂದ್ರಕ್ಕಾಗಿ ಕೆಲಸ ಮಾಡಿದ್ದರಿಂದ ಜೀವನಕ್ಕೆ ಮತ್ತು ಅದರ ವಿಸ್ಮಯಗಳಿಗೆ ಹಿಂದೆಂದಿಗಿಂತ ಅತಿಹೆಚ್ಚು ತೆರೆದುಕೊಂಡೆ. ಅವೆಲ್ಲವೂ ಆಕಸ್ಮಿಕವಾಗಿ ನಡೆದ ಘಟನೆಗಳಲ್ಲ ಎಂದು ನನಗೆ ಖಂಡಿತವಾಗಿ ಗೊತ್ತು. ತಪೋನಗರಕ್ಕೆ 9–8–2009ರ ನನ್ನ ಮೊದಲ ಭೇಟಿಯನ್ನು ನಾನೆಂದಿಗೂ ಮರೆಯಲಾರೆ. ನನ್ನ ಆಧ್ಯಾತ್ಮಿಕ ಪಯಣ ಹೆಚ್ಚುಹೆಚ್ಚು ಉತ್ತಮಗೊಳ್ಳುತ್ತಿದೆ. ನಕ್ಷತ್ರಗಳತ್ತ ನೋಡುತ್ತಲೇ ಇದ್ದೇನೆ.....

– ಪದ್ಮಜಾ ಬಾಲಾಜಿ

ನನಗೆ ಸಹಾಯ ಮತ್ತು ಮಾರ್ಗದರ್ಶನವನ್ನು ನೀಡುತ್ತಿರುವುದಕ್ಕಾಗಿ ನಿಮಗೆ ಮತ್ತು ಋಷಿಗಳಿಗೆ ಧನ್ಯವಾದಗಳು ಮತ್ತು ಇದನ್ನು ನಾನು ತುಂಬಾ ಮೆಚ್ಚಿಕೊಂಡಿದ್ದೇನೆ. ಜೀವನದ ಮುಂದಿನ ಅಧ್ಯಾಯಕ್ಕೆ ಹೋಗಲು ನನ್ನಲ್ಲಿ ಶಕ್ತಿಯಿದೆ, ಇದಕ್ಕೆ ಕಾರಣ ಋಷಿಗಳು ನನ್ನನ್ನು ನೋಡಿಕೊಳ್ಳುತ್ತಾರೆ ಎಂದು ನನಗೆ ತಿಳಿದಿರುವುದು. ಈ ಮಾರ್ಗವನ್ನು ಕಂಡುಕೊಂಡಿದ್ದಕ್ಕಾಗಿ ನಾನು ತುಂಬ ಅದೃಷ್ಟಶಾಲಿ.

– ಆ್ಯನ್ ಚಾಪ್‌ಮನ್

ಸಪ್ತಋಷಿಗಳ ಮಾರ್ಗವನ್ನು ಸೇರಿರುವುದು ಮತ್ತು ತಪೋನಗರದಲ್ಲಿ ಧ್ಯಾನಮಾಡುವುದು ನನ್ನ ಸಂತೋಷ ಮತ್ತು ತೃಪ್ತಿಯ ಮಟ್ಟವನ್ನು ಹೆಚ್ಚಿಸಿದೆ. ಇದು ಸಾರ್ಥಕತೆಯ ಅನುಭವವಾಗಿದೆ. ನೀವು ನಮ್ಮ ಮನಸ್ಸನ್ನು ಮತ್ತು ಹೃದಯವನ್ನು ಶುದ್ಧಗೊಳಿಸುತ್ತೀರಿ. ಹೃದಯದ ತುಂಬ ಪ್ರೀತಿ ಮತ್ತು ಬೆಳಕು, ದೇವರಿಗೆ ಮತ್ತು ಋಷಿಗಳಿಗೆ ಭಕ್ತಿ, ಸನ್ನಡತೆ ಮತ್ತು ಎಲ್ಲ ಜೀವಿಗಳ ಬಗ್ಗೆ ಅನುಕಂಪ, ಇವು ನಿಮ್ಮ ಮಂತ್ರಗಳಾಗಿವೆ. ನಿಮ್ಮ ಕನಸುಗಳನ್ನು ನನಸು ಮಾಡಲು ನನ್ನಲ್ಲಿ ಸ್ಥಿರಸಂಕಲ್ಪ, ಶಿಸ್ತು ಮತ್ತು ಪ್ರಯತ್ನಗಳು ಹೆಚ್ಚು ಬೇಕು. ನಿಮ್ಮ ಆಶೀರ್ವಾದಗಳೊಂದಿಗೆ ಇದನ್ನು ನಾನು ಪ್ರಯತ್ನಿಸುತ್ತೇನೆ.

– ಸುಧಾ ರಾಮನ್

16–10–2011ರಂದು ಲೈಟ್ ಚಾನಲ್ ಮಾಡುವವರಿಗೆ ಮಾರ್ಗದರ್ಶನ ನೀಡಿದಿರಿ. ನಮ್ಮ ಪ್ರೀತಿಯ ಬಂಧ ಬಲಗೊಳ್ಳುತ್ತಿರುವುದಕ್ಕೆ ನನಗೆ ತುಂಬ ಸಂತೋಷವಾಗಿದೆ. ಈ ಬಾಂಧವ್ಯವನ್ನು ವ್ಯಕ್ತಪಡಿಸಲು ನನ್ನಲ್ಲಿ ಪದಗಳಿಲ್ಲ. ದೈವದ ರೀತಿಗಳೇ ವಿಸ್ಮಯಕರ! ಗೊತ್ತಿದ್ದೊ, ಗೊತ್ತಿಲ್ಲದೆಯೋ ನೀವು ಹಲವಾರು ವರ್ಷಗಳಿಂದ ನನ್ನೊಟ್ಟಿಗಿದ್ದೀರಿ. ಆದರೆ ನಿಮ್ಮನ್ನು ಭೇಟಿಮಾಡಲು ಸಾಧ್ಯವಾದದ್ದು ಎರಡು ವರ್ಷಗಳ ಹಿಂದೆಯಷ್ಟೇ. ಪ್ರತಿ ಹೆಜ್ಜೆಯಲ್ಲೂ ನಿರಂತರವಾಗಿ ನನಗೆ ಮಾರ್ಗದರ್ಶನ ನೀಡುತ್ತಿರುವ ನಿಮಗೆ ನನ್ನ ಹೃದಯಾಂತರಾಳದಿಂದ ವಂದನೆಗಳು.

– ಮೀನಾ ಕುಂಬ್ಳೆ

ಒಳ್ಳೆಯ ಮಾನವರಾಗಬೇಕೆಂಬ ನಿಮ್ಮ ಪಾಠ ನನಗೆ ಸಹಾಯ ಮಾಡಿದೆ. 'ಯಾವಾಗಲೂ ಶಾಂತಿಯಿಂದಿರಿ' ಎಂಬ ನಿಯಮ, ಕೆಲಸದಲ್ಲಿನ ಅನೇಕ ಒತ್ತಡದ ಸನ್ನಿವೇಶಗಳನ್ನು ತಾಳಿಕೊಂಡು ಮುನ್ನಡೆಯಲು ಸಹಾಯಮಾಡುತ್ತಿದೆ. ನಾನು ಎಂಥ ಸಂದರ್ಭದಲ್ಲೂ ಗೊಂದಲಗೊಳ್ಳುವುದಿಲ್ಲ ಮತ್ತು ಸನ್ನಡತೆಯನ್ನು ಕಾಪಾಡಿಕೊಳ್ಳುತ್ತೇನೆ. ಈಗ ನಾನು ಜೀವನದ ಹೊಸ ತಿರುವಿನಲ್ಲಿದ್ದೇನೆ. ಆದರೂ ದೈವಿಕತೆ ನನ್ನೊಂದಿಗಿದೆ ಎಂದು ನನಗೆ ಗೊತ್ತಿರುವುದರಿಂದ ನಾನು ಸಮಾಧಾನದಿಂದಿದ್ದೇನೆ. ಮುಂಚೆ, ಆಲೋಚನೆಯ ಮಟ್ಟದಲ್ಲಿರುತ್ತಿದ್ದ ಕೆಲವು ನಂಬಿಕೆಗಳು, ಈಗ ನಿಧಾನವಾಗಿ ಅವು ನನ್ನ ಜೀವನ ಕ್ರಮ ಆಗುತ್ತಿವೆ. ಗುರೂಜಿ ನಿಮಗೆ ವಂದನೆಗಳು.

– ಗೀತಾ ಜೋಶಿ

ನಾಲ್ಕು ತಿಂಗಳ ಹಿಂದೆ ಧ್ಯಾನ ತೆಗೆದುಕೊಂಡಾಗಿನಿಂದ, ಜೀವನದ ಬಗ್ಗೆ ಯಾವುದೇ ದೂರುಗಳಿಲ್ಲದೆ ನಾನು ಸದಾಕಾಲ ಶಾಂತಿ ಮತ್ತು ತೃಪ್ತಿಯಿಂದಿದ್ದೇನೆ. ಈಗ ಜೀವನ ಹೆಚ್ಚು ಸುಂದರವಾಗಿದೆ. ಜನರೊಂದಿಗೆ ಸೌಹಾರ್ದಯುತ ಸಂಬಂಧ ಹೊಂದಿದ್ದೇನೆ ಮತ್ತು ಅವರಿಂದ ಹೆಚ್ಚು ಪ್ರೀತಿಯನ್ನು ಪಡೆಯುತ್ತಿದ್ದೇನೆ. ಪ್ರತಿಯೊಬ್ಬರಿಗೂ ನಾನು ಪ್ರೀತಿ ಮತ್ತು ಬೆಳಕನ್ನು ಕಳುಹಿಸುತ್ತೇನೆ. ನಾನು ಯಾವಾಗಲೂ ನಿಮಗೆ ಕೃತಜ್ಞಳಾಗಿದ್ದೇನೆ.

– ರಶ್ಮಿ ಕುಟೇಶ್ವರ್

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಉಷಾ ವಾಸನ್)

**ಪ್ರ: ಭ್ರಷ್ಟಾಚಾರ ವಿರೋಧಿ ಹೋರಾಟಗಳಂತಹ ಸಂಚಲನಗಳಿಗೆ ಋಷಿಗಳು ಹೇಗೆ ಸಹಾಯ ಮಾಡುತ್ತಾರೆ?**

ಉ: ಹೋರಾಟಗಳು ಮನುಷ್ಯನಿಂದ ಶುರುವಾದರೂ, ಅದರ ಮುಖಂಡರನ್ನು ಋಷಿಗಳು ಆರಿಸುತ್ತಾರೆ. ಅವರಿಗೆ ಏನು ಮಾಡಬೇಕು ಎಂಬುದನ್ನು ವಿವರಿಸಲಾಗುತ್ತದೆ ಮತ್ತು ಅಗಾಧವಾದ ಚೈತನ್ಯಗಳನ್ನು ನೀಡಲಾಗುತ್ತದೆ. ಋಷಿಗಳು ಮಾರ್ಗದರ್ಶಿಸಿ, ಸೂಚನೆಗಳನ್ನು ನೀಡಿ, ಸೂಕ್ಷ್ಮಮಟ್ಟದಲ್ಲಿ ಸಹಾಯ ಮಾಡುತ್ತಾರೆ. ಆದರೆ, ಅವರು ನೇರವಾಗಿ ಈ ಪ್ರಪಂಚದ ವ್ಯವಹಾರಗಳಲ್ಲಿ ಪ್ರವೇಶ ಮಾಡುವುದಿಲ್ಲ, ಏಕೆಂದರೆ ಅದಕ್ಕೆ ಅನೇಕ ನಿಯಮಗಳಿವೆ.

**ಪ್ರ: ಇಂಟರ್‌ನೆಟ್‌ನಲ್ಲಿ ಬಹಳಷ್ಟು ಹೊಸ ಜ್ಞಾನವಿದೆ. ಇದೆಲ್ಲವೂ ಋಷಿಗಳಿಂದ ಚಾನಲ್ ಮಾಡಿದುದೇ?**

ಉ: ಉನ್ನತ ಸ್ತರಗಳಿಂದ ಜ್ಞಾನವನ್ನು ಚಾನಲ್ ಮಾಡುವ ಬೆಳಕಿನ ಕಾರ್ಯಕರ್ತರು, ನಕ್ಷತ್ರಗಳು ಮತ್ತು ಮುಂದುವರೆದ ಭೂಮಿಗಳಂಥ ವಿವಿಧ ಮೂಲಗಳಿಂದ ಬಂದಿರುತ್ತಾರೆ. ಅವರು ಯಾವಾಗಲೂ ಅವರ ಮೂಲಗಳಿಂದ ಜ್ಞಾನವನ್ನು ಪಡೆಯಲು ಪ್ರಯತ್ನಿಸುತ್ತಾರೆ. ಆದರೆ 1,44,000 ಬೆಳಕಿನ ಕಾರ್ಯಕರ್ತರು ಮತ್ತು ನಾವು ಜ್ಞಾನವನ್ನು ಋಷಿಗಳಿಂದ ನೇರವಾಗಿ ಪಡೆಯುತ್ತೇವೆ.

**ಪ್ರ: ಈ ಪರಿವರ್ತನೆಯ ಕಾಲದಲ್ಲಿ ಭಗವಾನ್ ಕಲ್ಕಿಯ ಪಾತ್ರವೇನು?**

ಉ: ಭಗವಾನ್ ಕಲ್ಕಿ, ಹಂತಹಂತವಾಗಿ ಈ ಭೂಮಿಯ ಮೇಲಿರುವ ಪ್ರತಿಯೊಬ್ಬ ವ್ಯಕ್ತಿಯನ್ನೂ ಹೊಸ ಯುಗದ ಪ್ರವೇಶಕ್ಕೆ ತಯಾರು ಮಾಡುತ್ತಾರೆ. ಅವರು ವಿವಿಧ ಗುಂಪುಗಳನ್ನು ಸಂಪರ್ಕಿಸಿ, ಅನೇಕ ಸೂಚನೆಗಳನ್ನು ನೀಡುತ್ತಿದ್ದಾರೆ. ಅವರು ಮೇಲ್ವಿಚಾರಣೆ ಮಾಡಿ ಹೊಸ ಚೈತನ್ಯಗಳನ್ನು ಹರಡುತ್ತಿದ್ದಾರೆ. ಅವರು ಎಲ್ಲ ಪ್ರಳಯ ಪ್ರಕ್ರಿಯೆಗಳ ಮೇಲ್ವಿಚಾರಕರಾಗಿದ್ದಾರೆ. ಅವರು ಜನರನ್ನು ರಕ್ಷಿಸುತ್ತಾರೆ ಮತ್ತು ಕೆಲವು ಸಲ, ಪರಿವರ್ತನೆ ಹೊಂದದವರನ್ನು ಶಿಕ್ಷಿಸುತ್ತಾರೆ. ಅವರು ದುಷ್ಟಶಕ್ತಿಗಳಿಗೆ ಪ್ರಳಯ ಪ್ರಕ್ರಿಯೆಗೆ ಅಡ್ಡಬಾರದಂತೆ ಬುದ್ಧಿ ಹೇಳುತ್ತಾರೆ. ಭಗವಾನ್ ಕಲ್ಕಿ ಪ್ರಪಂಚದ ಮುಖಂಡರಿಗೆ ಕೂಡ ಸೂಚನೆಗಳನ್ನು ನೀಡುತ್ತಾರೆ ಮತ್ತು ಋಷಿಗಳ ಕೆಲಸದಲ್ಲಿ ಮಾರ್ಗದರ್ಶನ ಮಾಡುತ್ತಾರೆ.

**ಪ್ರ: ಈ ಭೂಮಿಯ ಮೇಲಿರುವ ಬೆಳಕಿನ ಕಾರ್ಯಕರ್ತರು ಯಾವಾಗ ಒಂದುಗೂಡಿ ಕೆಲಸ ಮಾಡುತ್ತಾರೆ?**

ಉ: ನನ್ನ ವೈಯಕ್ತಿಕ ಅಭಿಪ್ರಾಯದಂತೆ ಅವರು ಎಂದೂ ಹಾಗೆ ಮಾಡುವುದಿಲ್ಲ.

**ಪ್ರ: 2012ರ ಬಳಿಕ ನಾವು ಹೊಸಯುಗವನ್ನು ಪ್ರವೇಶಿಸುತ್ತೇವೆಯೇ?**

ಉ: ನಮಗೆ ಗೊತ್ತಿಲ್ಲ. ಫೋಟಾನ್ ಬೆಲ್ಟ್ ಶಕ್ತಿಗಳು ಈ ಭೂಮಿಯನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸುತ್ತವೆ. ಬಹಳಷ್ಟು ಮಹತ್ವದ ಬದಲಾವಣೆಗಳಾಗುತ್ತವೆ. ನಿಜವಾದ ಹೊಸಯುಗಕ್ಕೆ ಸಂಪೂರ್ಣವಾಗಿ ಅಲ್ಲವಾದರೂ, 2012ರಿಂದ ಒಂದು ಹೊಸ ಹಂತವನ್ನು ಪ್ರವೇಶಿಸುತ್ತೇವೆ ಎಂಬುದು ನನ್ನ ಬಲವಾದ ನಂಬಿಕೆ.

**ಪ್ರ: ನಮ್ಮ ಸಾಧನೆ ಯಾವಾಗ ಅಂತ್ಯಗೊಳ್ಳುತ್ತದೆ?**

ಉ: ನಾವು ಮುಕ್ತಿಯನ್ನು ಹೊಂದಿದಾಗ. ನಾವು ಪ್ರಾಮಾಣಿಕವಾಗಿ ಮತ್ತು ಸಹಜವಾಗಿ ಪ್ರೀತಿಯನ್ನು ಅಭಿವ್ಯಕ್ತಿಗೊಳಿಸಲು ಶುರುಮಾಡಿದಾಗ, ಸಾಧನೆ ಅಂತ್ಯವಾಗುತ್ತದೆ. ನಾವು ಉನ್ನತ ಮಟ್ಟದ ಪರಿಶುದ್ಧತೆಯನ್ನು ತಲುಪಿದಾಗ, ಅಹಂ-ಅನ್ನು ಬಿಟ್ಟಾಗ, ಪ್ರಾಮಾಣಿಕವಾಗಿ ವಿನಯವಂತರಾದಾಗ, ದೇವರು ಮತ್ತು ಬೆಳಕಿನೊಂದಿಗೆ ಶ್ರುತಿಗೊಂಡಾಗ ಸಾಧನೆ ಅಂತ್ಯವಾಗುತ್ತದೆ. ನಾವು ದೇವರನ್ನು ಪ್ರಾಪಂಚಿಕ ವಿಷಯಗಳಿಗೋಸ್ಕರ ಬೇಡುವುದನ್ನು ಮತ್ತು ಪೀಡಿಸುವುದನ್ನು ನಿಲ್ಲಿಸಿದಾಗ ಸಾಧನೆ ಅಂತ್ಯವಾಗುತ್ತದೆ. ನಮ್ಮ ಪ್ರತಿಯೊಂದು ಉಸಿರೂ ದೇವರ ಅನುಗ್ರಹ ಎಂದು ತಿಳಿದಾಗ ಮತ್ತು ನಮ್ಮ ಸುತ್ತಲಿನ ಜನರನ್ನು ದೇವರ ಉಡುಗೊರೆ ಎಂದು ಸ್ವೀಕರಿಸಿದಾಗ ಸಾಧನೆ ಅಂತ್ಯವಾಗುತ್ತದೆ.

**ಪ್ರ: ಧ್ಯಾನದಿಂದ ದೊರಕುವ ಅತ್ಯಂತ ಮುಖ್ಯವಾದ ಒಂದು ಲಾಭ ಯಾವುದು?**

ಉ: ದೇವರ ಸಾನಿಧ್ಯದ ಅರಿವು ಉಂಟಾಗುವುದೇ ಅತ್ಯಂತ ಮುಖ್ಯವಾದ ಲಾಭ. ನಾವು ಧ್ಯಾನ ಮಾಡಿ ನಿಶ್ಚಲತೆಯನ್ನು ತಲುಪಿದಾಗ, ಥಟ್ಟನೆ ನಮಗೆ ಸಾನಿಧ್ಯದ ಅರಿವಾಗುತ್ತದೆ. ಬೇರೆ ಸಮಯದಲ್ಲೂ, ನೀವು ನಿಮ್ಮ ಅರಿವಿನ ಮಟ್ಟವನ್ನು ಬದಲಾಯಿಸಿದಾಗ, ನಿಮಗೆ ಸಾನಿಧ್ಯದ ಅರಿವಾಗುತ್ತದೆ. ಈ ಸಾನಿಧ್ಯಕ್ಕೆ ನಮ್ಮ ಬಗ್ಗೆ ಕಾಳಜಿ, ಪ್ರೀತಿ, ಶಾಂತಿ, ಆನಂದ ಮತ್ತು ಎಲ್ಲವೂ ಇದೆ.

**ಪ್ರ: ಬೆಳಕನ್ನು ಅನುಭವಿಸಲು ಧ್ಯಾನದ ಅವಶ್ಯಕತೆ ಇದೆಯೇ?**

ಉ: ಬೆಳಕನ್ನು ಅನುಭವಿಸಲು ನಮ್ಮ ದೇಹ ನಿಶ್ಚಲತೆಯನ್ನು ಪ್ರವೇಶಿಸಬೇಕು ಮತ್ತು ಸಂಪೂರ್ಣವಾಗಿ ಮೌನವಾಗಬೇಕು. ಆದ್ದರಿಂದ ಬೆಳಕನ್ನು ಅಧಿಕವಾಗಿ ಮತ್ತು ಗಾಢವಾಗಿ ಅನುಭವಿಸಲು ಧ್ಯಾನದ ಅಗತ್ಯವಿದೆ. ■


### ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 100/- |
| Preparing for 2012 | 100/- |
| iGuruji - Vol 1 | 150/- |
| iGuruji - Vol 2 | 120/- |
| iGuruji - Vol 3 | 150/- |
| iGuruji - Vol 4 | 150/- |
| iGuruji - Vol 5 | 100/- |
| Higher Communication & Other Realities | 100/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| Guruji Speaks Vol - 4 | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ-ಗುರೂಜಿ ಭಾಗ 1 | 150/- |
| ಐ-ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012ಕ್ಕೆ ಸಿದ್ಧತೆಗಳು | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| २०१२ – सालाची तयारी (Marathi) | 100/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ)

ಇತ್ತೀಚಿನ ದಿನಗಳಲ್ಲಿ ನಾನು ಧ್ಯಾನಾಭ್ಯಾಸದ ಸಮಯದಲ್ಲಿ ಬಹಳಷ್ಟು ನಿಶ್ಚಲತೆಯನ್ನು ಅನುಭವಿಸುತ್ತಿದ್ದೇನೆ. ಅನೇಕ ಬಾರಿ, ನಾನು ಅದೆಷ್ಟು ವಿಸ್ತಾರಗೊಳ್ಳುತ್ತೇನೆಂದರೆ, ನನ್ನ ದೇಹ ಕೇವಲ ಒಂದು ರೇಖಾಕೃತಿಯಾದಂತೆ ಅನಿಸುತ್ತದೆ. ಕೆಲವು ಸಲ ನಾನು ಈ ಮಟ್ಟದ ಅಸ್ತಿತ್ವದಿಂದ ಹೊರಹೋದಂತೆ ಮತ್ತು ಬಾಗಿಲೊಂದನ್ನು ದಾಟಿ ಎಲ್ಲೋ ಮುಂದೆ ಸಾಗಿದಂತೆ ಅನಿಸುತ್ತದೆ.

– ಗೀತಾ ಜೋಶಿ

ಧ್ಯಾನದಲ್ಲಿ ಯೋಚನೆಗಳು ಬಹಳಷ್ಟು ಕಡಿಮೆಯಾಗಿ, ಕೆಲವೊಮ್ಮೆ ಕಾಲಾತೀತದ ಅನುಭವವಾಗುತ್ತದೆ. ನಾನೀಗ ಹೆಚ್ಚು ಶಾಂತತೆಯಿಂದಿದ್ದು, ಎಂತಹ ಸಂದರ್ಭದಲ್ಲೂ ಸಂಯಮದಿಂದಿರಲು ಸಾಧ್ಯವಾಗಿದೆ. ನನ್ನ ಅಂತರಂಗದಲ್ಲಿ ಧ್ಯಾನದ ಬಯಕೆ ಇನ್ನೂ ಹೆಚ್ಚಾಗಿದೆ.

– ಅಮಿತಾ ಪ್ರದೀಪ್

01-09-11ರಂದು ರಾ-ಧ್ಯಾನಮಂದಿರದಲ್ಲಿ ಧ್ಯಾನ ಮಾಡುತ್ತಿದ್ದಾಗ ಅನೇಕ ದೈವಿಕ ವ್ಯಕ್ತಿಗಳನ್ನು ಸೂಕ್ಷ್ಮ ಮಟ್ಟದಲ್ಲಿ ನೋಡಿದೆ. ಧ್ಯಾನದ ಕೊನೆಯಲ್ಲಿ ನನ್ನ ಮೂರನೆಯ ಕಣ್ಣು ತೆರೆದ ಅನುಭವವಾಯಿತು. ನಾನು ಆ ಕಣ್ಣಿನ ಮೂಲಕ ಹೊರಬಂದು, ಸೂಕ್ಷ್ಮ ಶರೀರದಲ್ಲಿ ಅಂತರಿಕ್ಷದಲ್ಲಿ ಪಯಣಿಸಿದೆ. ಅಲ್ಲಿ ಎಲ್ಲೆಡೆ ನೀಲಿ ಬೆಳಕನ್ನು ಕಂಡೆ. ನಂತರದ ಎರಡು ದಿನ ನನ್ನೆರಡು ಕಣ್ಣುಗಳ ಜೊತೆಗೆ ಮೂರನೇ ಕಣ್ಣಿನ ಮೂಲಕ ಸಹ ನೋಡಬಲ್ಲವಳಾಗಿದ್ದೆ. ಈಗ ನಾನು ಎಲ್ಲ ವಿಷಯಗಳನ್ನೂ ಬಹಳ ಸ್ಪಷ್ಟವಾಗಿ ಕಾಣಬಲ್ಲವಳಾಗಿದ್ದೇನೆ.

04-09-11ರಂದು ನನ್ನ ಅನಾರೋಗ್ಯದ ಕಾರಣ ಧ್ಯಾನ ತರಗತಿಗೆ ಬರಲಾಗದೆ ಬಹಳ ಬೇಸರವಾಯಿತು. ಇದ್ದಕ್ಕಿದ್ದಂತೆಯೇ ನಾನು ಸೂಕ್ಷ್ಮ ಶರೀರದಲ್ಲಿ ಹೊರಬಂದಾಗ, ಅಲ್ಲಿ ಗುರೂಜಿಯವರನ್ನು ಕಂಡೆ ಮತ್ತು ಅವರ ಮುಂದೆ ಕಣ್ಣೀರ್ಗರೆದೆ. ಆಗ ಗುರೂಜಿ, 'ನಿನ್ನ ಕಣ್ಣಿಗೆ ನಾನು ಕಾಣದಿದ್ದರೂ, ನಾನು ಯಾವಾಗಲೂ ನಿನ್ನೊಡನಿರುವೆ. ನೀನು ಗುಣಮುಖಳಾಗುವೆ, ಚಿಂತಿಸಬೇಡ' ಎಂದು ಸಮಾಧಾನಿಸಿದರು. ನಂತರ ನನ್ನನ್ನು ನಾನು ಧ್ಯಾನದ ತರಗತಿಯಲ್ಲಿ ಎಲ್ಲರ ಮಧ್ಯೆ ಬೆಳಕಿನಿಂದ ಹೊಳೆಯುತ್ತಿರುವಂತೆ ಕಂಡೆ. ನಾನು ಸೂಕ್ಷ್ಮ ಶರೀರದಲ್ಲೇ ಚೈತನ್ಯಗಳನ್ನು ಒಗ್ಗೂಡಿಸಿ ಅಲ್ಲಿದ್ದ ಗಣೇಶನಿಗೆ ಅರ್ಪಿಸಿ, ಪ್ರಾರ್ಥಿಸಿದಾಗ ನಾನು ಶೀಘ್ರ ಗುಣಮುಖಳಾಗುವೆ ಎಂಬ ಸಂದೇಶ ನನಗೆ ಬಂತು.

– ರಾಖಿ

ಬೆಳಿಗ್ಗೆ ಶಂಬಲ ತರಗತಿಯ ತಂತ್ರವನ್ನು ಅಭ್ಯಾಸ ಮಾಡಿ ರಾತ್ರಿ 11.15ಕ್ಕೆ ಮಲಗಿದೆ. ಆಗ ನಾನು ಪ್ರಜ್ಞೆಯೊಳಗೆ ಪಯಣಿಸುತ್ತಿದ್ದು, ನನಗೆ ಈ ಪ್ರಪಂಚದ ಅರಿವೇ ಇರಲಿಲ್ಲ. ಆಗ ಮಂಜಿನಿಂದ ಆವರಿಸಿದ್ದ, ಅತಿ ಎತ್ತರದ ಕಟ್ಟಡಗಳನ್ನು ಹೊಂದಿದ್ದ, ಅತ್ಯಂತ ಮುಂದುವರಿದ ಒಂದು ವಿಶಿಷ್ಟವಾದ ದೈವೀನಗರದ ದೃಶ್ಯವನ್ನು ಕಂಡೆ. ಅದು ಶಂಬಲ ಎಂದು ಗುರೂಜಿಯವರು ನಂತರ ಸ್ಪಷ್ಟಪಡಿಸಿದರು.

ದೇವರ ಸಾನ್ನಿಧ್ಯದ ಅನುಭವದ ನಂತರ ನನ್ನ ಧ್ಯಾನದ ಗುಣಮಟ್ಟ ಏರಿದೆ. ನನಗೆ ಅತ್ಯಂತ ಪ್ರಿಯವಾದ ಆ ಸಾನ್ನಿಧ್ಯದಲ್ಲಿ ನಾನು ದೃಢವಾಗಿ ಬೇರೂರಿರುವುದರಿಂದ, ನನ್ನ ಧ್ಯಾನವು ಆಳವಾಗಿದೆ. ನನ್ನ ಅರಿವೂ ಸಹ ಅಲ್ಲಿ ಸ್ಥಿರವಾಗಿದೆ. ಎಲ್ಲವನ್ನೂ ಅದೇ ನೋಡಿಕೊಳ್ಳುತ್ತದೆ.

28-09-11ರಂದು ಧ್ಯಾನ ಮಾಡುತ್ತಿದ್ದಾಗ, ನನ್ನ ಅಸ್ತಿತ್ವದ ಅರಿವೇ ಇಲ್ಲದೆ ಅಲ್ಲಿ ಇಂಪಾದ, ಮಂದಗತಿಯ, ಗಂಭೀರ ಮತ್ತು ಪ್ರಬಲವಾದ 'ಓಂಕಾರ' ಮಾತ್ರ ಇತ್ತು. ಅದು ಯಾವುದೇ ವ್ಯಕ್ತಿಯ ಅಥವಾ ವಾದ್ಯದ ಸ್ವರವಾಗಿರಲಿಲ್ಲ. ಅದು ಬೃಹತ್ತಾದ, ಎಲ್ಲವನ್ನೂ ಸುತ್ತುವರಿದ, ಗಹನವಾದ ಧ್ವನಿಯಾಗಿತ್ತು. ನಾನು 'ಓಂಕಾರ' ಉಗಮವಾಗುವ ನೀರವ ಸ್ಥಳವನ್ನು ಪ್ರವೇಶಿಸಿರುವುದು ನನಗೆ ಖಚಿತವಾಗಿತ್ತು. ನನಗೆ ಧ್ಯಾನದಲ್ಲಿ ಏನನ್ನಾದರೂ ಕೇಳಿಸಿಕೊಂಡ ಅನುಭವವಾಗಿರುವುದು, ಇದೇ ಮೊದಲ ಸಾರಿ.

– ವಿದ್ಯಾ ವಿಶ್ವಾಮಿತ್ರ

ನನ್ನ ಧ್ಯಾನದಲ್ಲಾದ ಸುಧಾರಣೆಯ ಫಲವಾಗಿ ನನ್ನೊಳಗಿನ ಶಾಂತಿ ಹೆಚ್ಚಾಗಿದೆ. ನನ್ನ ದೇಹದ ಒಂದು ಅವಿಭಾಜ್ಯ ಭಾಗ ಎಂಬಂತೆ ಬೆಳಕು ನನ್ನಲ್ಲಿರುವುದನ್ನು ನಾನು ಅನುಭವಿಸುತ್ತಿದ್ದೇನೆ. ನಾನು ಗೊಂದಲದಲ್ಲಿದ್ದಾಗ ಈ ಬೆಳಕನ್ನು ಪ್ರಾರ್ಥಿಸಿದರೆ, ಅದು ನನಗೆ ಸಲಹೆ ನೀಡಿ ಸಹಕರಿಸುತ್ತದೆ.

ನಾನೀಗ ಸಮಾಧಾನದಿಂದಿದ್ದೇನೆ ಮತ್ತು ಎಂತಹ ಪರಿಸ್ಥಿತಿ ಎದುರಾದರೂ ಅದರ ಬಗ್ಗೆ ಹೆಚ್ಚು ಚಿಂತಿಸದೆ, ಅದನ್ನು ನಿಭಾಯಿಸಲು ಈಗ ಸಾಧ್ಯವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಕಷ್ಟವೆನಿಸಿದರೂ, ನಾನು ಜನರನ್ನು ಅರ್ಥಮಾಡಿಕೊಂಡು ಅವರಿಗೆ ಪ್ರೀತಿಯನ್ನು ಕಳುಹಿಸಲು ಸಾಧ್ಯವಾಗಿದೆ.

– ನಳಿನಿ ರಾಜಶೇಖರ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು - 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ